# ಪ್ರೇಮದ ಭಾಷೆ

ಪ್ರೇಮದ ಭಾಷೆಗಿಂತ ದ್ವೇಷದ ಭಾಷೆಯೆ ಕಳೆದ ಮೂರೂವರೆ ದಶಕಗಳಲ್ಲಿ ಭಾರತದ ಸಮಾಜದಲ್ಲಿ ಸ್ವೀಕೃತ ಮಾರ್ಗವಾಗಿ ಪರಿಣಮಿಸಿದೆ. ಬಡವರು, ದುರ್ಬಲರು ಹಾಗೂ ಅಸಹಾಯಕರು ಈ ದ್ವೇಷದ ಭಾಷೆಯ ಕಿಚ್ಚಿಗೆ ಸಿಲುಕಿ ಉರಿದುಹೋಗುತ್ತಿದ್ದಾರೆ. ವರ್ತಮಾನವನ್ನು ಮರೆತು ಎಂದೊ ನಡೆದ ಭೂತಕಾಲದ ಘಟನೆಗಳನ್ನು ವರ್ತಮಾನದ ಪ್ರಮುಖ ಸಮಸ್ಯೆಯಂತೆ ಬಿಂಬಿಸುತ್ತಾ, ಬದುಕಿರುವವರ ಬದುಕನ್ನು ಮೂರಾಬಟ್ಟೆ ಮಾಡುತ್ತಿರುವ ಈ ವಿದ್ಯಮಾನ ಇಂದು ಸರ್ವವ್ಯಾಪಿಯಾಗಿದೆ. ಇದು ನಮ್ಮ ಕಾಲಮಾನ ಸೃಷ್ಟಿಸಿರುವ ವಿಲಕ್ಷಣ ಸಂಗತಿ. ಇಂತಹ ನಿಂದನೀಯ ಪರಂಪರೆಯನ್ನೇ ಬಲಪಡಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿರುವುದು ಆತಂಕಕಾರಿಯಾಗಿದೆ.

ಚರಿತ್ರೆಯನ್ನು ಹೇಗೆ ನೋಡಬೇಕೆಂದು ಜವಹರಲಾಲ್ ನೆಹರೂ ನಮಗೆ ನೆನಪಿಸುತ್ತಾರೆ. ‘ನೀನು ಹಿಂದಿನ ಚರಿತ್ರೆಯನ್ನು ಸಹಾನುಭೂತಿಯ ಕಣ್ಣುಗಳಿಂದ ನೋಡಿದಲ್ಲಿ, ಆ ಒಣ ಮೂಳೆಗಳು ರಕ್ತ ಮಾಂಸಗಳಿಂದ ತುಂಬಿಕೊಳ್ಳುತ್ತವೆ. ನೀನು ಭೂತಕಾಲವನ್ನು ತಿಳಿದುಕೊಳ್ಳಬೇಕೆಂದರೆ ಅದನ್ನು ನೀನು ಸಹಾನುಭೂತಿಯಿಂದ ಮತ್ತು ವಿವೇಚನೆಯಿಂದ ನೋಡಬೇಕು. ಬಹಳ ಹಿಂದೆ ಬದುಕಿದ್ದ ವ್ಯಕ್ತಿಯನ್ನು ಅರ್ಥಮಾಡಿಕೊಳ್ಳಬೇಕಾದರೆ ನೀನು ಅವನ ಪರಿಸರವನ್ನು, ಅವನು ಜೀವಿಸಿದ್ದ ಪರಿಸ್ಥಿತಿಗಳನ್ನು, ಅವನ ಮನಸ್ಸನ್ನು ತುಂಬಿದ್ದ ಭಾವನೆಗಳನ್ನು ಅರ್ಥಮಾಡಿಕೊಳ್ಳಬೇಕು’. ಇಷ್ಟಕ್ಕೂ ವರ್ತಮಾನದ ಸಮಸ್ಯೆಗಳಿಗೆ ವರ್ತಮಾನದಲ್ಲಿಯೇ ಉತ್ತರಗಳನ್ನು ಕಂಡುಕೊಳ್ಳಬೇಕೇ ಹೊರತು, ಭೂತಕಾಲದಲ್ಲಲ್ಲ! ಆದರೆ ಭೂತಕಾಲ ನಮ್ಮ ನಾಗರಿಕತೆಗೆ ಉದಾತ್ತವಾದ, ಆದರ್ಶದ ಮೌಲ್ಯಗಳನ್ನು ನೀಡಿದೆ ಎಂಬುದನ್ನು ಮರೆಯಬಾರದು. ಸಾಮರಸ್ಯ, ಶಿಕ್ಷಣ, ನಿಸ್ವಾರ್ಥ, ಸಹಿಷ್ಣುತೆಯ ಭಾಷೆ, ಸತ್ಯದ ಪಾಲನೆ, ಉದಾರ ನಡತೆ ಇವೆಲ್ಲವನ್ನೂ ನಮ್ಮ ಜೋಳಿಗೆಗೆ ತುಂಬಿದೆ. ಹಾಗೆ ನೋಡಿದರೆ ನಾವು ನಮ್ಮ ಭೂತಕಾಲದ ಋಣದ ಮಕ್ಕಳು.

ಈ ದ್ವೇಷದ ಭಾಷೆ ನೆಲೆಸಿರುವುದು ಜನಸಾಮಾನ್ಯರ ಹೃದಯದಲ್ಲಲ್ಲ! ಕಾರ್ಮಿಕರು, ರೈತರು, ಶ್ರಮಜೀವಿಗಳು ಇವರ್‍ಯಾರೂ ದ್ವೇಷದ ಮಾತುಗಳನ್ನು ಮಾತನಾಡುವುದಿಲ್ಲ! ಆದರೆ ವಾಗ್ವಾದಗಳ ಮೂಲಕ ಜೀವಿಸುತ್ತಿರುವವರು ಇಂತಹ ವೈಷಮ್ಯದ ಬೀಜಗಳನ್ನು ಬಿತ್ತುವುದು ಒಂದು ರೂಢಿಯೇ ಆಗಿಹೋಗಿದೆ. ಇದು ಭವಿಷ್ಯದಲ್ಲಿ ಭಾರತಕ್ಕೆ ವಿನಾಶಕಾರಿಯಾಗಲಿದೆ ಎಂಬುದನ್ನು ಮರೆಯಬಾರದು. ಇಲ್ಲಿ ಕಾದಾಟವಿರುವುದಿಲ್ಲ, ಆಯುಧಗಳಿರುವುದಿಲ್ಲ, ಆದರೆ ರಕ್ತ ಮಾತ್ರ ಜನರ ಹೃದಯದಿಂದ ಹರಿದಿರುತ್ತದೆ. ಅಂದರೆ ಇದೊಂದು ನಿಯಮವಿಲ್ಲದ ಆಟದಂತಾಗಿದೆ. ಇಂತಹ ಅಗೋಚರ ಹಿಂಸೆಯಿಂದಾಗಿ ಈ ದೇಶದ ಸಾಮರಸ್ಯದ ಸಹಿಷ್ಣುತೆ ಅದ್ಭುತವಾದ ಪರಂಪರೆ ಇಂದು ನಶಿಸುವ ಹಂತಕ್ಕೆ ಬಂದು ತಲುಪಿದೆ.

ಬುದ್ಧನ ಜೀವಿತದಲ್ಲಿ ನಡೆದ ಒಂದು ಘಟನೆ ಹೀಗಿದೆ: ರಾಜಗೃಹದಲ್ಲಿ ಭಾರದ್ವಾಜ ಎಂಬುವವನು ವಾಸವಿದ್ದ. ಅವನು ಎಲ್ಲರನ್ನೂ ನಿಷ್ಕರುಣೆಯಿಂದ ನಿಂದಿಸುತ್ತಿದ್ದ. ಒಮ್ಮೆ ಬುದ್ಧದೇವ ಭಿಕ್ಷೆಗಾಗಿ ಭಾರದ್ವಾಜನ ಮನೆಯ ಬಳಿಗೆ ಬಂದ. ಭಾರದ್ವಾಜ ಬುದ್ಧನನ್ನು ನೋಡಿ ಎಂದಿನಂತೆ ಹೀನಾಮಾನವಾಗಿ ಬಯ್ಯಲು ಆರಂಭಿಸಿದ. ಅಸಭ್ಯವಾದ ಮಾತುಗಳಿಂದ ಜರಿದ. ಅವಮಾನಿಸಿದ. ಆದರೂ ಬುದ್ಧದೇವ ಭಾರದ್ವಾಜನ ಬಯ್ಗುಳಗಳಿಗೆ ಪ್ರತಿಕ್ರಿಯಿಸದೆ ಶಾಂತವಾಗಿಯೇ ಇದ್ದ. ಇದರಿಂದ ಮತ್ತಷ್ಟು ಕನಲಿದ ಭಾರದ್ವಾಜ ಇನ್ನಷ್ಟು ಹೊಲಸು ಮಾತುಗಳಿಂದ ನಿಂದಿಸತೊಡಗಿದ. ಅದಕ್ಕೆ ಕಾರಣವೂ ಇತ್ತು. ಭಾರದ್ವಾಜನ ಸೋದರನೊಬ್ಬ ಬುದ್ಧದೇವನ ಭಿಕ್ಷು ಸಂಘ ಸೇರಿದ್ದ. ನನ್ನ ತಮ್ಮ ನಮ್ಮನ್ನು ತೊರೆದುಹೋಗಿದ್ದಕ್ಕೆ ಬುದ್ಧನೇ ಕಾರಣ ಎಂದು ತಿಳಿದು ಭಾರದ್ವಾಜ ಈ ರೀತಿ ನಿಂದಿಸತೊಡಗಿದ.

ಕೊನೆಗೆ ಬುದ್ಧದೇವ ಭಾರದ್ವಾಜನಿಗೆ ಕೇಳಿದ ‘ನಿನ್ನ ಮನೆಗೆ ಮಿತ್ರರು, ಬಂಧುಗಳು, ಜ್ಞಾನಿಗಳು ಯಾವಾಗಲಾದರೂ ಬರುತ್ತಾರೆಯೇ?’ ಎಂದು ಪ್ರಶ್ನಿಸಿದ. ಮೊದಲೇ ಕೋಪಗೊಂಡಿದ್ದ ಭಾರದ್ವಾಜ ‘ಹೌದು, ಎಲ್ಲೊ ಕೆಲವೊಮ್ಮೆ ಬರುತ್ತಾರೆ’ ಎಂದು ಒರಟಾಗಿಯೇ ಹೇಳಿದ. ‘ಹಾಗೆ ಬಂದವರಿಗೆ ನೀನು ವಿವಿಧ ಭಕ್ಷ್ಯ, ಭೋಜನಗಳನ್ನು ಬಡಿಸಿ ಅವರನ್ನು ಸತ್ಕರಿಸುತ್ತಿವೆಯಲ್ಲವೆ?’ ಎಂದು ಬುದ್ಧದೇವ ಮತ್ತೆ ಕೇಳಿದ. ‘ಹೌದು ಗೌತಮ, ನನ್ನ ಮನೆಯಲ್ಲಿರುವುದನ್ನು ನೀಡಿ ಅವರನ್ನು ತೃಪ್ತಿಪಡಿಸಿ ಕಳುಹಿಸಿಕೊಡುತ್ತೇನೆ’ ಎಂದು ಹೇಳಿದ. ಬುದ್ಧದೇವ ಮುಂದುವರೆಸಿ ಕೇಳಿದ ‘ಒಂದು ವೇಳೆ ನಿನ್ನ ಅತಿಥಿಗಳು ನೀನು ನೀಡಿದ ಭಕ್ಷ್ಯ ಭೋಜನಗಳನ್ನು ಸ್ವೀಕರಿಸದಿದ್ದರೆ, ಅವು ನಿನ್ನಲ್ಲೇ ಉಳಿಯುತ್ತವಲ್ಲವೇ ಬಂಧು’. ಭಾರದ್ವಾಜ ‘ಹೌದು, ಅವು ನನ್ನಲ್ಲೇ ಉಳಿಯುತ್ತವೆ’ ಎಂದು ಹೇಳಿದ. ಹಾಗಾದರೆ ಕೇಳು ಭಾರದ್ವಾಜ ‘ನೀನು ಇದುವರೆಗೂ ನಮ್ಮನ್ನು ಬಯ್ದು, ಜರಿದೆಯಲ್ಲ ಅವೆಲ್ಲವೂ ಈಗ ನಿನ್ನವೇ. ಏಕೆಂದರೆ, ನಾನು ನಿನ್ನ ಬಯ್ಗುಳವನ್ನು, ನಿಂದೆಯನ್ನು ಸ್ವೀಕರಿಸುವುದಿಲ್ಲ. ಆದ್ದರಿಂದ ಅವೆಲ್ಲವೂ ನಿನ್ನವೇ ಆಗುತ್ತವೆ’ ಎಂದ. ಬುದ್ಧದೇವನ ಮಾತುಗಳಿಂದ ಭಾರದ್ವಾಜನ ಕೋಪ ಕರಗಿತು. ತನ್ನದು ತಪ್ಪು ಎನಿಸಿತು. ಪ್ರಾಯಶ್ಚಿತ್ತದಿಂದ ಅವನ ಮನಸ್ಸು ಈಗ ಪರಿಶುದ್ಧವಾಗಿತ್ತು.

ದ್ವೇಷದಿಂದ ದ್ವೇಷಕ್ಕೆ ಅಳಿವಿಲ್ಲ. ದ್ವೇಷದಿಂದ ಪಾರಾಗುವುದು ದಯೆ, ಕಾರುಣ್ಯಗಳಿಂದ ಮಾತ್ರ ಸಾಧ್ಯ. ಯಾರ ನಡೆ ನುಡಿಯಲ್ಲಿ, ವಿಚಾರದಲ್ಲಿ ದ್ವೇಷ ಇರುವುದಿಲ್ಲವೋ ಅವನಲ್ಲಿ ಆನಂದ ನೆಲೆಗೊಂಡಿರುತ್ತದೆ. ಎಂದು ಬುದ್ಧದೇವ ಭಾರದ್ವಾಜನಿಗೆ ತಿಳಿಯಹೇಳಿದ.

ಇದನ್ನೇ ನಮ್ಮ ವಚನಕಾರರು ‘ಅನ್ಯರಿಗೆ ಅಸಹ್ಯ ಪಡಬೇಡ’, ‘ನುಡಿದರೆ ಮುತ್ತಿನ ಹಾರದಂತಿರಬೇಕು’ ಎಂದು ನುಡಿದು ಅದನ್ನೇ ಸ್ವತಃ ನಡೆದು ತೋರಿಸಿದ್ದಾರೆ. ಈ ದಾರಿ ನಮ್ಮೆಲ್ಲರ ದಾರಿ. ದ್ವೇಷದ ಭಾಷೆಗೆ ಇರುವ ಮದ್ದು ಎಂದರೆ, ಅದರ ದಿಕ್ಕಿನೆಡೆ ಗಮನಹರಿಸದಿರುವುದು, ದ್ವೇಷದ ಕೊಂಡದಲ್ಲಿ ಹುಟ್ಟಿದ ಬೆಂಕಿ ಮೊದಲು ಆ ಕೊಂಡವನ್ನೇ ಸುಡುತ್ತದೆ. ಆದ್ದರಿಂದಲೇ ಗಾಲಿಬ್ ಹೇಳಿದ ‘ಯಾರಾದರೂ ಕೆಟ್ಟ ಮಾತಾಡಿದರೆ ಕೇಳಿಸಿಕೊಳ್ಳಬೇಡ/ ಯಾರಾದರೂ ಕೆಟ್ಟದ್ದು ಮಾಡಿದ್ದರ ಬಗ್ಗೆ ಮಾತಾಡಬೇಡ/ ಯಾರಾದರೂ ದಾರಿತಪ್ಪುವುದು ಕಂಡರೆ ತಡೆದು ನಿಲ್ಲಿಸು/ ತಪ್ಪಿಗೆ ಅವ ಬಲಿಯಾಗಿದ್ದರೆ ಅವನನ್ನು ಕ್ಷಮಿಸಿಬಿಡು’ ಇದು ಹೃದಯವಂತರು ತೋರಿದ ಮಾರ್ಗ.

ಜನಸಾಮಾನ್ಯರ ನಡುವೆ ನದಿಯಂತೆ ಹರಿಯುವ ಭಾಷೆ, ಅವರ ಸಮಸ್ಯೆಗಳನ್ನು, ನೋವು–ನಲಿವುಗಳನ್ನು, ಅವರ ಆಸೆ ಆಕಾಂಕ್ಷೆಗಳನ್ನು ಕುರಿತಾಗಿರಬೇಕು. ಭಾಷೆ ಜನಸಾಮಾನ್ಯರನ್ನು ಬೆಸೆಯುವ ಸಾಧನವಾಗಿರಬೇಕೇ ಹೊರತು, ಸಮಾಜವನ್ನು ವಿಭಜಿಸುವ, ಹೃದಯಗಳನ್ನು ನೋಯಿಸುವ ಕಿಚ್ಚು ಆಗಬಾರದು. ಇಷ್ಟಕ್ಕೂ ದ್ವೇಷ ದುರ್ಬಲರ ಭಾಷೆಯೇ ಹೊರತು, ಹೃದಯವಂತರ ಭಾಷೆಯಲ್ಲ.

■ ಜಿ.ವಿ. ಆನಂದಮೂರ್ತಿ

## ಮಾತೇ ಮುತ್ತು

- ಅಧಿಕಾರ ಹೆಚ್ಚಿದಷ್ಟು ಅದರ ದುರುಪಯೋಗದ ಅಪಾಯ ಹೆಚ್ಚು.
  —ಎಡ್ಮಂಡ್ ಬರ್ಕ್
- ನಿಮ್ಮ ಹಿರಿತನ ಕಳೆದುಕೊಳ್ಳದೆ ಮಕ್ಕಳೊಂದಿಗೆ ಮಕ್ಕಳಾಗಲು ಸಾಧ್ಯವಾದರೆ ಅದು ಬಹಳ ಉತ್ತಮ.
  —ಜಾರ್ಜ್ ಮಾಸೋನ್ ಬ್ರೌನ್
- ಅನುಭವಕ್ಕೆ ಬರದ ಹೊರತು ಯಾವುದೂ ನಿಜವಾಗುವುದಿಲ್ಲ. ನಿಮ್ಮ ಜೀವನ ಅದಕ್ಕೆ ಉದಾಹರಣೆಯಾಗದ ಹೊರತು ಗಾದೆ ಮಾತು ಕೂಡ ನಿಜವಾದ ಮಾತಾಗದು.
  —ಜಾನ್ ಕೀಟ್ಸ್
- ನಾಲಿಗೆಯ ಶಕ್ತಿಗಿಂತಲೂ ಅನಿಷ್ಟವಾದುದು ಈ ಪ್ರಪಂಚದಲ್ಲಿ ಯಾವುದೂ ಇಲ್ಲ.
  —ಬೈಬಲ್
- ಎಷ್ಟೋ ಬಾರಿ ನಾನು ಮಾತನಾಡಿರುವುದಕ್ಕೆ ಸಂತಾಪಪಟ್ಟಿದ್ದೇನೆ. ಆದರೆ ಯಾವ ಸಂದರ್ಭಗಳಲ್ಲಿಯೂ ಮೌನವಾಗಿ ಉಳಿದುದಕ್ಕೆ ಸಂತಾಪಪಟ್ಟಿಲ್ಲ.
  —ಪಿ. ವೈರಸ್
- ಒಂಟಿಗಿರುವಂತೆ ನಮ್ಮಲ್ಲಿ ಅನೇಕರಿಗೆ ಅಂತಹ ಡುಬ್ಬಗಳಿಲ್ಲದೆ ಇರುವುದರಿಂದಲೇ ಈ ಸಂಸಾರವೆಂಬ ಮರಳು ಕಾಡು ಭಯಂಕರವಾಗಿ ಕಾಣುತ್ತದೆ.
  —ಪುತಿನ